ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 167/2021**

**ಫಿರ್ಯಾದಿ- 11 ಚಾಸಾ- 12**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಡಾಃ ರೇಣುಕಾ ಎಸ್ |
| ಗಂಡನ ಹೆಸರುಃ | : | ಲೇಟ್ ಡಾಃ ಶಿವಕಿರಣ್ ಸಿ ಎಸ್ |
| ವಯಸ್ಸುಃ | : | 43 ವರ್ಷ |
| ಉದ್ಯೋಗಃ | : | ನೇತ್ರತಜ್ಞರು, ಸಾರ್ವಜನಿಕ ಆಸ್ಪತ್ರೆ ಆಲೂರು |
| ವಾಸ | : | ಆಲೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:23-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು 2019ರಿಂದ ಇಲ್ಲಿಯವರೆಗೂ ಆಲೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2.ದಿನಾಂಕ 1-9-2020ರಂದು ಈ ಪ್ರಕರಣಕ್ಕೆ ಸಂಬಂಧಿದಂತೆ ಸುಮಾರು ಸಾಯಂಕಾಲ 5-35 ಗಂಟೆಗೆ ಸುಮಾರು 57 ವರ್ಷ ವಯಸ್ಸಿನ ಹೆಚ್ ಎಂ ಮೊಹಮ್ಮದ್ ಪಿಡಿಒ ಮಡಬಲು ಗ್ರಾ.ಪಂ. ಇವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ಅವರನ್ನು ಪರೀಕ್ಷೆ ಮಾಡಿದಾಗ ಬಲಭುಜದಲ್ಲಿ 4 ಇಂಟು 2 ಸೆಂಮಿಾ ಅಳತೆಯ ಹರಿದ ಗಾಯ ಕಂಡುಬಂತು. ತಲೆಯ ಎಡಬುರುಡೆಯಲ್ಲಿ ನೋವು ಇದೆ ಎಂದು ಹೇಳುತ್ತಿದ್ದರು. ಈ ಎರಡೂ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿದ್ದು ಅವರಿಗೆ ನಾನು ಚಿಕಿತ್ಸೆ ನೀಡಿರುತ್ತೇನೆ. ಈ ಬಗ್ಗೆ ಗಾಯದ ಪ್ರಮಾಣಪತ್ರವನ್ನು ನಿಪಿ-11 ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು

ನಿಪಿ-11(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಎಂ.ಒ.1 ಲಾಂಗ್ ಕತ್ತಿಯಿಂದ ಹಲ್ಲೆ ಮಾಡಲು ಪ್ರಯತ್ನಿಸಿದಾಗ ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟಾಗ ಅದರ ಭಾಗ ತಾಗಿದರೆ ಈ ರೀತಿಯ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಹೆಚ್ ಎಸ್. ಎಂ **ವಕೀಲರಿಂದಃ**

ಗಾಯಾಳು ಯಾರ ಜೊತೆ ಆಸ್ಪತ್ರೆಗೆ ಬಂದಿದ್ದರೆಂದು ಗಾಯದ ಪ್ರಮಾಣಪತ್ರದಲ್ಲಿ ನಾನು ಕಾಣಿಸಿಲ್ಲ. ಯಾರಿಂದ ಗಾಯಗಳಾಯಿತೆಂದು ಕೂಡ ಕಾಣಿಸಿಲ್ಲ. ಸಾಕ್ಷಿಯು ಮುಂದುವರೆದು ಪರಿಚಯ ಇರುವ ವ್ಯಕ್ತಿಯಿಂದ ಆಗಿದೆ ಎಂದು ಹೇಳಿದರೆಂದು ಬರೆದಿರುತ್ತೇನೆ ಎನ್ನುತ್ತಾರೆ. ಕಿಟಕಿಯ ಬಾಗಿಲುಗಳು ತಾಗಿದರೆ ಈ ರೀತಿಯ ಗಾಯಗಳು ಆಗುತ್ತವೆ ಎಂದರೆ ಸಾಕ್ಷಿಯು ಅದರ ಚೂಪಾದ ಭಾಗ ತಾಗಿದರೆ ಆಗುವ ಸಾಧ್ಯತೆ ಇದೆ ಎನ್ನುತ್ತಾರೆ. ಕಿಟಕಿಯ ಬಾಗಿಲು ತಾಗಿದರೆ ನೋವಿನ ಗಾಯ ಆಗುತ್ತದೆ ಎಂದರೆ ಸಾಕ್ಷಿಯು ಚೂಪಾದ ಭಾಗ ಇದ್ದರೆ ಆಗುತ್ತದೆ ಎನ್ನುತ್ತಾರೆ. ಎಂ.ಒ.1 ರಿಂದ ಹಲ್ಲೆ ಮಾಡಲು ಪ್ರಯತ್ನಿಸಿದಾಗ ತಪ್ಪಿಸಿಕೊಂಡರೆ ಅದರಿಂದ ಈ ಗಾಯಗಳು ಆಗುವ ಸಾಧ್ಯತೆ ಆಗುತ್ತದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**